Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC
# Civil Judge

## Previous Year Paper
### Mains (Law Paper-III) 08 Oct, 2022

Teachingninja.in

## HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2022
ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2022

## LAW PAPER III
ಕಾನೂನು ಪತ್ರಿಕೆ – III

**Framing of charges and writing of Judgment in Criminal Case**
ಅಪರಾಧ ಪ್ರಕರಣಗಳಲ್ಲಿ ಆರೋಪಣೆಗಳನ್ನು ರೂಪಿಸುವುದು ಮತ್ತು ತೀರ್ಪನ್ನು ಬರೆಯುವುದು

Date: 08.10.2022 Max. Marks: 100
ದಿನಾಂಕ: 08.10.2022 ಗರಿಷ್ಠ ಅಂಕಗಳು: 100

Time: 2.30 PM to 5.30 PM
ಸಮಯ: ಮಧ್ಯಾಹ್ನ 2.30 ರಿಂದ 5.30 ಗಂಟೆ

**Instructions:**
**ಸೂಚನೆಗಳು:**

1. Option is given to the candidates to write answers either in English or in Kannada

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, the questions as framed in English language shall prevail.

   ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

Teachingninja.in

**1. Frame proper plea in the following case.**

**Marks: 07**

Towards the repayment of Rs.3,25,000/- borrowed from the complainant, accused had issued a cheque bearing No.8765432 dated 20.06.2017 drawn on Kotak Mahindra Bank Ltd, M.G.Road Branch, Bengaluru, in favour of the complainant. When the complainant presented the said cheque for encashment at the above Bank, it was returned with an endorsement "Funds insufficient" on 16.08.2017. The complainant issued a legal notice on 29.08.2017 calling upon the accused to pay the cheque amount. Inspite of service of notice, accused neither replied to the said notice nor paid the cheque amount. Hence, the complainant filed the complaint before Additional Chief Metropolitan Magistrate Court, Mayo Hall, Bengaluru.

**ಈ ಕೆಳಗಿನ ಪ್ರಕರಣದಲ್ಲಿ ಸರಿಯಾದ ಆರೋಪಣೆಯನ್ನು ರೂಪಿಸಿ:** **ಅಂಕಗಳು: 07**

ಫಿರ್ಯಾದಿಯಿಂದ ಪಡೆದುಕೊಂಡ ರೂ.3,25,000/–ನ್ನು ಮರುಪಾವತಿ ಮಾಡಲು ಅರೋಪಿಯು ಬೆಂಗಳೂರಿನ ಎಂ.ಜಿ.ರಸ್ತೆ ಶಾಖೆಯ ಕೋಟಕ್ ಮಹಿಂದ್ರ ಬ್ಯಾಂಕಿನ ಚೆಕ್ ನಂ.8765432 ದಿನಾಂಕ 20.06.2017ರ ಚೆಕ್‌ನ್ನು ಫಿರ್ಯಾದಿಯ ಪರವಾಗಿ ನೀಡಿದ್ದನು. ಫಿರ್ಯಾದಿಯು ಆ ಚೆಕ್‌ನ್ನು ಮೇಲೆ ಹೇಳಿದ ಬ್ಯಾಂಕಿಗೆ ನಗಧಿಕರಣಕ್ಕಾಗಿ ಹಾಜರು ಪಡಿಸಿದಾಗ ಅದು ದಿನಾಂಕ 16.08.2017ರಂದು "ಸಾಕಷ್ಟು ಹಣ ಇಲ್ಲ" ಎನ್ನುವ ಹಿಂಬರಹದಿಂದ ವಾಪಸ್ಸು ಬಂದಿತ್ತು. ದಿನಾಂಕ 29.08.2017ರಂದು ಫಿರ್ಯಾದಿಯು ಆ ಚೆಕ್ಕಿನ ಹಣವನ್ನು ಪಾವತಿ ಮಾಡುವಂತೆ ಆರೋಪಿಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದನು. ಆ ನೋಟೀಸು ಆರೋಪಿಗೆ ಜಾರಿಯಾಗಿದ್ದರೂ ಕೂಡ ಆರೋಪಿಯು ಅದಕ್ಕೆ ಉತ್ತರ ಕೊಟ್ಟಿಲ್ಲ ಅಥವಾ ಚೆಕ್ಕಿನ ಹಣವನ್ನು ಪಾವತಿ ಮಾಡಿರುವುದಿಲ್ಲ. ಆದುದರಿಂದ ಫಿರ್ಯಾದಿಯು ಬೆಂಗಳೂರಿನ ಮೆಯೋ ಹಾಲಿನಲ್ಲಿರುವ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದ ಮುಂದೆ ಒಂದು ಫಿರ್ಯಾದಿಯನ್ನು ಸಲ್ಲಿಸಿದ್ದನು.



Teachingninja.in

**2. Frame appropriate charge for the Trial of accused on the basis of the following charge sheet material.**

**Marks: 18**

It was stated in the charge sheet that the accused No.1 is the husband and accused No.2 is the mother in law of the complainant and the marriage between the complainant and accused No.1 was solemnized on 12.09.2018 at Gajanoor and after the marriage, they were residing together in the house of accused at Bijjavalli, Thirthahalli Taluk, within the jurisdiction of Thirthahalli Police station. Few months after marriage, accused No.1 and 2 started ill treating the complainant by picking up the quarrel with her for silly reasons, inflicted cruelty on her and gave her physical and mental torture by demanding the dowry and on 07.01.2019 at about 11.30 AM in their house at Bijjavalli, accused No.1 and 2, with common intention, picked up the quarrel with complainant and abused her in filthy language and assaulted her with hands on all over her body, causing fracture on her left shoulder and posed threat to her with dire consequences and drove her out of their house and told the complainant not to enter their house again without bringing the dowry amount of Rupees two lakhs. With these allegations, Thirthahalli Police have filed the charge sheet against the accused No.1 and 2.

**ಈ ಕೆಳಗೆ ತೋರಿಸಿದ ದೋಷಾರೋಪಣಾ ಪತ್ರದಲ್ಲಿ ಪ್ರಸ್ತಾಪಿಸಿದ ಮಾಹಿತಿಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ವಿಚಾರಣೆಯನ್ನು ನಡೆಸಲು ಸೂಕ್ತ ದೋಷಾರೋಪಣೆಯನ್ನು ರೂಪಿಸಿ:**

**ಅಂಕಗಳು: 18**

ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿದಂತೆ 1ನೇ ಆರೋಪಿಯು ಫಿರ್ಯಾದಿಯ ಗಂಡ ಮತ್ತು 2ನೇ ಆರೋಪಿಯು ಫಿರ್ಯಾದಿಯ ಅತ್ತೆಯಾಗಿದ್ದು ಫಿರ್ಯಾದಿ ಮತ್ತು 1ನೇ ಆರೋಪಿಯ ನಡುವೆ



Teachingninja.in

ಮದುವೆಯು ದಿನಾಂಕ 12.09.2018ರಂದು ಗಾಜನೂರಿನಲ್ಲಿ ನಡೆದಿದ್ದು ಮದುವೆ ಆದ ಬಳಿಕ ಅವರು ತೀರ್ಥಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ತೀರ್ಥಹಳ್ಳಿ ತಾಲೂಕಿನ ಬಿಜ್ಜವಳ್ಳಿಯಲ್ಲಿರುವ ಆರೋಪಿತರ ಮನೆಯಲ್ಲಿ ವಾಸ ಮಾಡಿಕೊಂಡಿದ್ದರು. ಮದುವೆಯಾದ ಕೆಲವು ತಿಂಗಳುಗಳ ಬಳಿಕ 1 ಮತ್ತು 2ನೇ ಆರೋಪಿತರು ಫಿರ್ಯಾದಿಯೊಂದಿಗೆ ಚಿಕ್ಕ ಪುಟ್ಟ ಕಾರಣಗಳಿಗಾಗಿ ಜಗಳ ತೆಗೆದು ಆಕೆಗೆ ಹಿಂಸೆ ಕೊಡಲು ಪ್ರಾರಂಭಿಸಿದರು ಮತ್ತು ಆಕೆಯ ಮೇಲೆ ಕ್ರೌರ್ಯ ನಡೆಸಿ ಆಕೆಯಿಂದ ವರದಕ್ಷಿಣೆಗಾಗಿ ಬೇಡಿಕೆಯನ್ನು ಇಟ್ಟು ಆಕೆಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ಕೊಟ್ಟು ದಿನಾಂಕ 07.01.2019ರಂದು ಬೆಳಗ್ಗೆ 11.30 ಗಂಟೆಗೆ ಬಿಜ್ಜವಳ್ಳಿಯಲ್ಲಿರುವ ತಮ್ಮ ಮನೆಯಲ್ಲಿ 1 ಮತ್ತು 2ನೇ ಆರೋಪಿತರು ಸಮಾನ ಉದ್ದೇಶದಿಂದ ಫಿರ್ಯಾದಿಯೊಂದಿಗೆ ಜಗಳ ತೆಗೆದು ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು ಮತ್ತು ಕೈಗಳಿಂದ ಆಕೆಗೆ ಹೊಡೆದ ಕಾರಣ ಆಕೆಯ ಎಡ ಭುಜದಲ್ಲಿ ಮೂಳೆ ಮುರಿತ ಉಂಟಾಗಿದ್ದು ಮತ್ತು ಆಕೆಗೆ ಜೀವ ಬೆದರಿಕೆಯನ್ನು ಹಾಕಿ ಎರಡು ಲಕ್ಷ ರೂಪಾಯಿ ಹಣವನ್ನು ವರದಕ್ಷಿಣೆಯಾಗಿ ತರದೇ ಮನೆಗೆ ಬರಬಾರದು ಎಂದು ಹೇಳಿ ಆಕೆಯನ್ನು ಮನೆಯಿಂದ ಹೊರಕ್ಕೆ ಹಾಕಿದ್ದರು. ಈ ಎಲ್ಲಾ ಆರೋಪಗಳೊಂದಿಗೆ ತೀರ್ಥಹಳ್ಳಿ ಪೋಲೀಸರು 1 ಮತ್ತು 2ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

**3.** Write a judgment of **CONVICTION** in the following case by giving valid and cogent reasons assuming rival contentions and documents of the prosecution from the facts and evidence narrated below.

**(Provision of law, which have been kept blank, shall be stated in the judgment)**

**Marks: 75**

**Facts of the Case:**

That on 20.01.2010 at about 03.30 p.m. on Udyavara bridge at Udyavara, on Udupi-Mangalore National Highway, accused, being the driver of a Private bus bearing Registration Number KA-20-M-7187, by driving the same in a rash and negligent manner, dashed to a motor bike, which was coming from the opposite



Teachingninja.in

direction, due to which, one Sundara, who was riding the motor bike, sustained fatal injuries and died at the spot and CW2-Harish, who was the pillion rider in the bike, sustained grievous injuries and accused ran away from the spot after the accident and failed to provide medical treatment to injured CW.2 and also failed to intimate the jurisdictional police about the accident.

On the basis of the complaint lodged by CW1, Udupi Rural Police have registered a First Information Report in Crime No.27/2010 and the Investigating Officer proceeded to the spot, drawn the spot mahazar and prepared the sketch of the accident spot and recorded the statement of witness and after obtaining the wound certificate of CW2 and post mortem report, inquest report and Motor Vehicles Inspectors report and after completion investigation, CW12 filed the charge sheet by alleging that the accused has committed the offences punishable under Sections ____, _______ and ________ of Indian Penal Code and Section ______of the Motor Vehicles Act, 1988.

The court took the cognizance of the case and accused appeared before the court was enlarged on bail. A copy of the charge sheet and its enclosures were furnished to the accused. Plea of the accused was recorded and accused pleaded not guilty and claimed to be tried.

To prove the guilt of the accused, prosecution let in following evidence before the court.



Teachingninja.in

**CW1 – Sridhar:**

CW1, who was examined as PW1, deposed that on 20.01.2010 at about 03.30 p.m. when CW2 and Sundara were going towards Udupi in a motor bike, on Udyavara Bridge, accused, being a driver of a Private bus, by driving the same in a rash and negligent manner, dashed the bus to the bike, due to which, Sundara died at the spot and CW2 sustained grievous injuries. PW1 further deposed that he was coming in a car behind them and after reaching the spot, he took the injured CW2 and body of deceased Sundara to the Udupi District Hospital and thereafter lodged a complaint before the Udupi Rural Police as per Ex.P1. PW1 further deposed that on the next day of the accident, police came to the spot and drawn a mahazar as per Ex.P2 and seized the bike and bus involved in the accident.

During the course of his cross examination, PW1 admitted that he was not an eye witness to the accident and he reached the spot about 10 minutes after the accident. PW1 further deposed during the course of his cross examination that when he reached the spot many people gathered there. PW1 further said that bike was fully damaged and front portion of the bus was also damaged. PW1 admitted that there are steep curves on the road before Udyavara Bridge while coming from Udupi, due to which, vehicles cannot be driven in high speed. PW1 denied the suggestion that due to the high speed riding of motor bike by deceased Sundara, he dashed the motor bike to the bus coming



Teachingninja.in

from opposite direction. PW1 also denied the suggestion that accused is not responsible for the cause of accident.

**CW2- Harish:**

CW2, who was examined as PW2, deposed that on 20.01.2010 at about 3.30 p.m. when he and Sundara were going towards Udupi in their bike, on Udyavara Bridge, a Private Bus coming from opposite direction dashed to their bike, due to which, he sustained fracture on his right leg and Sundara died at the spot. PW2 further deposed that initially he was admitted to District Hospital Udupi and thereafter he was shifted to K.M.C. Hospital, Manipal for further treatment. PW.2 further deposed that the accident was due to the rash and negligent driving of the private bus by this accused.

PW2, during the course of his cross examination, admitted that they were coming back to Udupi after attending a function at Padubidri. PW2 denied that deceased Sundara has consumed alcohol at the said function and he was riding the motor bike in high speed. PW2 admitted that width of the road at the accident spot is very narrow and there are many curves on the road before the Udyavara bridge. PW2 denied the suggestion that Sundara lost control over the motor bike and himself dashed his motor bike to the Private bus by riding the same in high speed. PW2 denied the suggestion that the accused is not responsible for the cause of accident.



Teachingninja.in

**CW3 – Dayananda:**

CW3, who was examined as PW3 deposed that, on 20.01.2010 at about 3.30 p.m. he and CW4 were going to Mangalore in a Private bus driven by this accused. PW3 further deposed that when the bus was going slowly on the Udyavara Bridge, a motor bike coming in a high speed from opposite direction, dashed to the Private bus and rider sustained fatal injuries and died at the spot and pillion rider sustained some injuries.

PW3 was treated as hostile witness by the learned Assistant Public Prosecutor and cross examined. During the course of his cross examination by learned Assistant Public Prosecutor, PW3 denied the suggestion that the accident was due to rash and negligent driving of Private bus by the accused.

**CW6 – Raghu:**

CW6, who was examined as PW4, deposed that during the month of January 2010 at about 3.00 p.m. when he was going in his car towards Udupi from Katapadi, Sundara and CW2 were going in a motor bike in front of his car at the distance of about 150 meters. PW4 further deposed that on Udyavara bridge, a Private bus coming from Udupi in a rash and negligent manner and in high speed dashed to the motor bike in which Sundara and CW2 were going, due to which, Sundara fell on the road, sustained fatal injuries and died at the spot and CW2 sustained grievous injuries. PW4 further deposed that on the next day of the accident, police came to the spot, drawn a mahazar as per Ex.P2



Teachingninja.in

and prepared the sketch of the spot as per Ex.P.3 and seized the bus and motor bike involved in the accident.

PW4, during the cross of his cross examination, deposed that there are curves on the road before Udyavara bridge and width of the road is narrow. PW4 further deposed that he is the relative of deceased Sundara and both of them have attended a function at Padubidri on that day. PW4 denied the suggestion that deceased Sundara has consumed alcohol at the said function. PW4 also denied the suggestion that deceased Sundara was talking over the mobile phone at the time of accident and lost control over his motor bike and he himself dashed his motor bike to the Private bus. PW4 denied the suggestion that the accident was not due to the rash and negligent driving of Private bus by the accused. PW4 also denied the suggestion that police have not visited to the spot and not drawn any mahazar in his presence. PW4 denied that he has put the signature for the mahazar at the police station and since deceased Sundara is his relative, he is deposing falsely to help his family members to get the compensation.

**<u>CW12 – Vijay Kumar:</u>**

CW12, who was examined as PW5, deposed that he was working as an Inspector of Police in Udupi Rural Police Station during the year 2009 to 2011. PW5 further deposed that on 20.01.2010 at about 6.00 p.m. when he was in the police station CW1 appeared before him and lodged a complaint as per Ex.P1, on the basis of which, he has registered a FIR in Crime No.27/2010 as per Ex.P8. PW5 further deposed that on the next day, he visited the spot, drawn a mahazar as per Ex.P2 and



Teachingninja.in

prepared sketch of the spot as per Ex.P3 and seized the bus and motor bike involved in the accident. PW5 further deposed that he has recorded the statement of CW2 and CW4 to 6. PW5 further deposed that he visited the Government Hospital Udupi and conducted the inquest on the dead body of deceased Sundara as per Ex.P4. PW5 further deposed that he arrested the accused and released him on bail and after obtaining the wound certificate of CW2 as per Ex.P.5 and post mortem report as per Ex.P.6 and IMV report as per Ex.P.7 and after completion of investigation, he filed the charge sheet against the accused.

PW5, during the course of his cross-examination, deposed that when he reached the spot, many people have gathered there. PW.5 admitted that he has not recorded the statements of all those persons. PW.5 denied the suggestions that the witnesses have not given any statement before him and he has prepared their statement for convenience of this case. PW.5 denied the suggestion that he has prepared the mahazar and spot sketch at the police station and obtained the signatures the witnesses. PW.5 admitted that, there were steep curves on the road before the Udyavara bridge as shown in the Ex.P.3 skecth and width of the road on the Udyavara bridge is quite narrow. PW.5 also admitted that two heavy vehicles can not be driven at a time on the bridge. PW5 denied the suggestion that in order to facilitate the legal heirs of deceased Sundara to get the compensation, he filed false charge sheet against the accused, though after visiting the spot and conducting investigation, he came to know that the accident was due to the fault of deceased Sundara.



Teachingninja.in

**STATEMENT OF THE ACCUSED UNDER SECTION 313 OF CODE OF CRIMINAL PROCEDURE**

All the incriminating evidence appearing against the accused was read over to him and accused denied them as false and stated that he was driving the Private bus on the Udyavara bridge slowly and rider of the bike coming from the opposite direction was talking over the mobile phone and riding it in a high speed and failed to control the bike and dashed to his bus. The accused further stated that he was not responsible for the cause of accident.

**HIGHLIGHTS OF THE ARGUMENTS FOR THE PROSECUTION**

- The learned Assistant Public Prosecutor argued that there is no dispute about the occurrence of the accident and identity of the accused as the driver of the offending Private bus.
- The inquest report, post mortem report, IMV report and wound certificate of CW2 were all marked with consent, as the accused has not disputed the death of deceased Sundara due to the accident and injury sustained by CW2.
- Only disputed question is about cause of accident. In order to prove that the accident was due to the rash and negligent driving of Private bus by this accused, there is evidence of PW1, 2 and 4. Their evidence is corroborated with spot mahazar as per Ex.P2 and sketch as per Ex.P3.
- Even though PW1, 2 and 4 were cross examined by the learned counsel for the accused, no material aspects were brought out from their cross examination to disbelieve their oral testimony.



Teachingninja.in

- The evidence let in by the prosecution is free from any infirmities and would establish the case of the prosecution beyond all reasonable doubt. Therefore, the learned Assistant Public Prosecutor prayed to convict the accused.

**HIGHLIGHTS OF THE ARGUMENTS FOR THE ACCUSED**

- The learned counsel for the accused argued that evidence let in by the prosecution is full of material contradictions, variations and discrepancies.
- The witnesses who have supported the prosecution are relatives and interested witness. Therefore, their oral testimony cannot be considered to convict the accused.
- Though independent witnesses were available the Investigating Officer has secured only the friends and relatives of deceased Sundara as witness.
- Spot sketch and evidence of prosecution witnesses proves that there are steep curves on the road from Udupi before Udyavara bridge, due to which, bus can not be driven in high speed at the accident spot.
- Prosecution witnesses also admitted that width of the road on the Udyavara bridge is also narrow and two heavy vehicles can not be driven at a time.
- On all these grounds, learned counsel for the accused prayed for acquitting the accused by extending the benefit of doubt to him.



Teachingninja.in

ಈ ಕೆಳಗಿನ ಸಂಗತಿ ಮತ್ತು ಸಾಕ್ಷ್ಯಗಳಿಂದ ಉಭಯ ಪಕ್ಷಗಾರರ ವಾದ ಮತ್ತು ಅಭಿಯೋಜನೆಯ ದಾಖಲಾತಿಗಳನ್ನು ಭಾವಿಸಿಕೊಂಡು ಸಮಂಜಸ ಮತ್ತು ತರ್ಕಬದ್ದ ಸಮರ್ಥನಾಂಶಗಳನ್ನು ನೀಡಿ **ಆರೋಪಿಯನ್ನು ಶಿಕ್ಷಿಸುವ** ತೀರ್ಪನ್ನು ಬರೆಯಿರಿ.

**(ಖಾಲಿ ಬಿಟ್ಟಿರುವ ಕಾನೂನಿನ ನಿಭಂದನೆಗಳನ್ನು ತೀರ್ಪಿನಲ್ಲಿ ನಮೂದಿಸತಕ್ಕದ್ದು)**

**ಅಂಕಗಳು: 75**

**ಪ್ರಕರಣದ ಸಂಗತಿಗಳು**

ದಿನಾಂಕ 20.01.2010ರಂದು ಮಧ್ಯಾಹ್ನ 3.30 ಗಂಟೆಗೆ ಉಡುಪಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಉದ್ಯಾವರದ ಉದ್ಯಾವರ ಸೇತುವೆಯ ಮೇಲೆ ಆರೋಪಿಯು ಕೆಎ–20–ಎಂ–7187 ನಂಬರಿನ ಖಾಸಗಿ ಬಸ್ಸಿನ ಚಾಲಕನಾಗಿ ಆ ಬಸ್ಸನ್ನು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ಮುಂಭಾಗದಿಂದ ಬರುತ್ತಿದ್ದ ಒಂದು ಮೋಟಾರು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಆ ಮೋಟಾರು ಬೈಕನ್ನು ಚಲಾಯಿಸುತ್ತಿದ್ದ ಓರ್ವ ಸುಂದರ ಎನ್ನುವವರಿಗೆ ಮಾರಣಾಂತಿಕವಾದ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಆ ಮೋಟಾರು ಬೈಕಿನ ಹಿಂಭಾಗದಲ್ಲಿ ಕುಳಿತಿದ್ದ ಚಾಸಾ.2–ಹರೀಶ ಎನ್ನುವವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಅಪಘಾತದ ಬಳಿಕ ಆರೋಪಿಯು ಗಾಯಾಳು ಚಾಸಾ.2 ರವರಿಗೆ ಚಿಕಿತ್ಸೆ ಕೊಡಿಸದೆ ಮತ್ತು ಕಾರ್ಯವ್ಯಾಪ್ತಿ ಪೋಲೀಸರಿಗೆ ಅಪಘಾತವಾಗಿರುವ ವಿಷಯವನ್ನು ತಿಳಿಸದೆ ಸ್ಥಳದಿಂದ ಓಡಿ ಹೋಗಿದ್ದನು.

ಚಾಸಾ.1 ರವರು ಸಲ್ಲಿಸಿದ ದೂರಿನ ಆಧಾರದ ಮೇಲೆ ಉಡುಪಿ ಗ್ರಾಮಾಂತರ ಪೋಲೀಸರು ಪ್ರಕರಣ ಸಂಖ್ಯೆ 27/2010ರಲ್ಲಿ ಒಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳ ಮಹಜರನ್ನು ನಡೆಸಿ ಅಪಘಾತ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು ಚಾಸಾ.2 ರವರ ಗಾಯದ ಪ್ರಮಾಣ ಪತ್ರವನ್ನು ಮತ್ತು ಮರಣೋತ್ತರ ಪರೀಕ್ಷಾ ವರದಿ, ಶವ ಮಹಜರು, ವಾಹನ ನಿರೀಕ್ಷಕರ ವರದಿಯನ್ನು ಪಡೆದು ಚಾಸಾ.12 ರವರು ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ ____, ____ ಮತ್ತು ____ ಮತ್ತು ಮೋಟಾರು ವಾಹನ ಕಾಯಿದೆ, 1988ರ ಕಲಂ ____ ನ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ನ್ಯಾಯಾಲಯವು ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತ್ತು. ದೋಷಾರೋಪಣಾ ಪಟ್ಟಿ



Teachingninja.in

ಮತ್ತು ಅದರೊಂದಿಗೆ ಲಗ್ತಿಕರಿಸಿದ ದಾಖಲಾತಿಗಳ ಪ್ರತಿಗಳನ್ನು ಆರೋಪಿಗೆ ನೀಡಲಾಯಿತು. ಆರೋಪಿಯ ಮೇಲೆ ಆರೋಪಣೆಯನ್ನು ರಚಿಸಿದಾಗ ಆರೋಪಿಯು ತಾನು ತಪ್ಪು ಮಾಡಿಲ್ಲ ಮತ್ತು ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿದ್ದನು.

ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ನ್ಯಾಯಾಲಯದ ಮುಂದೆ ಈ ಕೆಳಗಿನ ಸಾಕ್ಷ್ಯವನ್ನು ನೀಡಿರುತ್ತದೆ.

**ಚಾಸಾ1–ಶ್ರೀಧರ**

ಚಾಸಾ.1 ಅಸಾ.1 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 20.01.2010ರಂದು ಮಧ್ಯಾಹ್ನ 3.30 ಗಂಟೆಗೆ ಮೃತ ಸುಂದರ ಮತ್ತು ಚಾಸಾ.2 ರವರು ಮೋಟಾರು ಬೈಕಿನಲ್ಲಿ ಉಡುಪಿಯ ಕಡೆಗೆ ಹೋಗುತ್ತಿದ್ದಾಗ ಉದ್ಯಾವರ ಸೇತುವೆಯ ಮೇಲೆ ಆರೋಪಿಯು ಒಂದು ಖಾಸಗಿ ಬಸ್ಸಿನ ಚಾಲಕನಾಗಿ ಆ ಬಸ್ಸನ್ನು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ಮೋಟಾರು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಸುಂದರ ಸ್ಥಳದಲ್ಲಿಯೇ ಮೃತ ಪಟ್ಟಿದ್ದು ಚಾಸಾ.2 ರವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು ಎಂದು ನುಡಿಯುತ್ತಾರೆ. ಅಸಾ.1 ಮುಂದುವರಿದು ತಾನು ಅವರ ಹಿಂದೆ ಒಂದು ಕಾರಿನಲ್ಲಿ ಬರುತಿದ್ದೆ ಮತ್ತು ಸ್ಥಳಕ್ಕೆ ಬಂದ ಬಳಿಕ ತಾನು ಗಾಯಾಳು ಚಾಸಾ.2 ರವರನ್ನು ಮತ್ತು ಮೃತ ಸುಂದರನ ಶವವನ್ನು ಉಡುಪಿ ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೆ ಮತ್ತು ಆ ಬಳಿಕ ಉಡುಪಿ ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ ನಿಶಾನೆ ಪಿ.1 ರಂತೆ ಒಂದು ದೂರನ್ನು ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಚಾಸಾ.1 ಮುಂದುವರಿದು ಅಪಘಾತ ನಡೆದ ಮಾರನೆಯ ದಿನ ಪೋಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ.2ರಂತೆ ಒಂದು ಸ್ಥಳ ಮಹಜರನ್ನು ನಡೆಸಿ ಅಪಘಾತದಲ್ಲಿ ಒಳಗೊಂಡ ಬೈಕು ಮತ್ತು ಬಸ್ಸನ್ನು ಅಮಾನತ್ತು ಪಡಿಸಿಕೊಂಡರು ಎಂದು ಸಾಕ್ಷಿ ನುಡಿಯುತ್ತಾರೆ.

ತನ್ನ ಪಾಟೀ ಸವಾಲಿನಲ್ಲಿ ಅಸಾ.1 ತಾನು ಈ ಅಪಘಾತ ಆಗಿರುವುದನ್ನು ಕಣ್ಣಾರೆ ನೋಡಿಲ್ಲ ಮತ್ತು ಅಪಘಾತ ನಡೆದ ಸುಮಾರು ಹತ್ತು ನಿಮಿಷಗಳ ನಂತರ ತಾನು ಸ್ಥಳಕ್ಕೆ ಬಂದಿದ್ದೆ ಎಂದು ಒಪ್ಪಿಕೊಳ್ಳುತ್ತಾರೆ. ಅಸಾ.1 ಮುಂದುವರಿದು ತನ್ನ ಪಾಟೀ ಸವಾಲಿನಲ್ಲಿ ತಾನು ಸ್ಥಳಕ್ಕೆ ತಲುಪಿದಾಗ ಅಲ್ಲಿ ಬಹಳಷ್ಟು ಜನರು ಸೇರಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ಮುಂದುವರಿದು ಬೈಕು ಸಂಪೂರ್ಣವಾಗಿ ಜಖಂಗೊಂಡಿದ್ದು ಬಸ್ಸಿನ ಮುಂಭಾಗ ಕೂಡ ಜಖಂಗೊಂಡಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ಮುಂದುವರಿದು ಉಡುಪಿ ಕಡೆಯಿಂದ ಬರುತ್ತಿರುವಾಗ ಉದ್ಯಾವರ



Teachingninja.in

ಸೇತುವೆಯ ಮೊದಲು ರಸ್ತೆಯಲ್ಲಿ ತಿರುವುಗಳು ಇರುವ ಕಾರಣ ವಾಹನಗಳನ್ನು ಅತೀ ವೇಗವಾಗಿ ಚಲಾಯಿಸಲು ಆಗುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಅಸಾ.1 ಮೃತ ಸುಂದರ ಮೋಟಾರು ಬೈಕನ್ನು ಅತೀ ವೇಗವಾಗಿ ಚಲಾಯಿಸಿ ಮುಂಭಾಗದಿಂದ ಬರುತ್ತಿದ್ದ ಬಸ್ಸಿಗೆ ತನ್ನ ಮೋಟಾರು ಬೈಕನ್ನು ಡಿಕ್ಕಿ ಹೊಡೆದಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.1 ಮುಂದುವರಿದು ಆರೋಪಿಯು ಈ ಅಪಘಾತಕ್ಕೆ ಕಾರಣನಲ್ಲ ಎನ್ನುವ ಸೂಚನೆಯನ್ನು ಕೂಡ ನಿರಾಕರಿಸಿದ್ದಾರೆ.

**<u>ಚಾಸಾ.2 – ಹರೀಶ</u>**

ಚಾಸಾ.2 ಅಸಾ.2 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 20.01.2010ರಂದು ಮಧ್ಯಾಹ್ನ 3.30 ಗಂಟೆಗೆ ತಾನು ಮತ್ತು ಸುಂದರ ಒಂದು ಮೋಟಾರು ಬೈಕಿನಲ್ಲಿ ಉಡುಪಿಯ ಕಡೆಗೆ ಹೋಗುತ್ತಿದ್ದಾಗ ಉದ್ಯಾವರ ಸೇತುವೆಯ ಮೇಲೆ ಮುಂಭಾಗದಿಂದ ಬರುತ್ತಿದ್ದಂತ ಒಂದು ಖಾಸಗಿ ಬಸ್ಸು ಅವರ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ತನ್ನ ಬಲಗಾಲಲ್ಲಿ ಮೂಳೆ ಮುರಿತ ಆಗಿತ್ತು ಮತ್ತು ಸುಂದರ ಸ್ಥಳದಲ್ಲಿಯೆ ಮೃತ ಪಟ್ಟಿದ್ದ ಎನ್ನುತ್ತಾರೆ. ಅಸಾ.2 ಮುಂದುವರಿದು ಮೊದಲು ಆತನನ್ನು ಉಡುಪಿಯ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು ಆ ಬಳಿಕ ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಗೆ ವರ್ಗಾಯಿಸಲಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಮುಂದುವರಿದು ಆರೋಪಿಯು ಖಾಸಗಿ ಬಸ್ಸನ್ನು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಕಾರಣ ಈ ಅಪಘಾತವಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ.

ಅಸಾ.2 ತನ್ನ ಪಾಟೀ ಸವಾಲಿನಲ್ಲಿ ಅವರು ಆ ದಿನ ಪಡುಬಿದ್ರೆಯಲ್ಲಿ ಒಂದು ಸಮಾರಂಭಕ್ಕೆ ಹಾಜರಾಗಿ ಉಡುಪಿಗೆ ವಾಪಸ್ಸು ಬರುತ್ತಿದ್ದರು ಎಂದು ಒಪ್ಪಿಕೊಳ್ಳುತ್ತಾರೆ. ಅಸಾ.2 ಮೃತ ಸುಂದರ ಆ ಸಮಾರಂಭದಲ್ಲಿ ಮಧ್ಯಪಾನ ಮಾಡಿದ್ದ ಮತ್ತು ಮೋಟಾರು ಬೈಕನ್ನು ಅತೀ ವೇಗವಾಗ ಚಲಾಯಿಸುತ್ತಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.2 ಅಪಘಾತ ನಡೆದ ಸ್ಥಳದಲ್ಲಿ ರಸ್ತೆಯ ಅಗಲ ತುಂಬಾ ಕಡಿಮೆ ಇದೆ ಮತ್ತು ಉದ್ಯಾವರ ಸೇತುವೆಯ ಮೊದಲು ರಸ್ತೆಯಲ್ಲಿ ತುಂಬಾ ತಿರುವುಗಳಿವೆ ಎನ್ನುವದನ್ನು ಒಪ್ಪಿಕೊಳ್ಳುತ್ತಾರೆ. ಅಸಾ.2 ಸುಂದರ ಮೋಟಾರು ಬೈಕನ್ನು ಅತೀ ವೇಗವಾಗಿ ಚಲಾಯಿಸಿ ನಿಯಂತ್ರಣ ತಪ್ಪಿ ಆತನೆ ತನ್ನ ಮೋಟಾರು ಬೈಕನ್ನು ಖಾಸಗಿ ಬಸ್ಸಿಗೆ ಡಿಕ್ಕಿ ಹೊಡೆದಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.2 ಆರೋಪಿ ಈ ಅಪಘಾತಕ್ಕೆ ಕಾರಣ ಅಲ್ಲ ಎನ್ನುವ ಸೂಚನೆಯನ್ನು ಕೂಡ ನಿರಾಕರಿಸಿದ್ದಾರೆ.



Teachingninja.in

**ಚಾಸಾ.3 – ದಯಾನಂದ**

ಚಾಸಾ.3 ಅಸಾ.3 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 20.01.2010ರಂದು ಮಧ್ಯಾಹ್ನ 3.30 ಗಂಟೆಗೆ ತಾನು ಮತ್ತು ಚಾಸಾ.4 ಆರೋಪಿಯು ಚಲಾಯಿಸುತ್ತಿದ್ದ ಒಂದು ಖಾಸಗಿ ಬಸ್ಸಿನಲ್ಲಿ ಮಂಗಳೂರಿಗೆ ಹೋಗುತ್ತಿದ್ದೆವು ಎಂದು ಹೇಳುತ್ತಾರೆ. ಅಸಾ.3 ಮುಂದುವರಿದು ಆ ಬಸ್ಸು ಉದ್ಯಾವರ ಸೇತುವೆಯ ಮೇಲೆ ನಿಧಾನವಾಗಿ ಹೋಗುತ್ತಿದ್ದಾಗ ಮುಂಭಾಗದಿಂದ ಒಂದು ಮೋಟಾರು ಬೈಕು ಅತೀ ವೇಗವಾಗಿ ಬಂದು ಖಾಸಗಿ ಬಸ್ಸಿಗೆ ಡಿಕ್ಕಿ ಹೊಡೆದಿತ್ತು ಮತ್ತು ಬೈಕನ್ನು ಚಲಾಯಿಸುತ್ತಿದ್ದವನಿಗೆ ಮಾರಣಾಂತಿಕ ಗಾಯವಾಗಿ ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದ ಮತ್ತು ಬೈಕಿನ ಹಿಂಭಾಗದಲ್ಲಿ ಕುಳಿತಿದ್ದವನಿಗೆ ಕೆಲವೊಂದು ಗಾಯಗಳಾಗಿದ್ದವು ಎಂದು ಸಾಕ್ಷಿ ನುಡಿಯುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಸಾ.3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಗಣಿಸಿ ಪಾಟೀ ಸವಾಲು ಮಾಡಿದ್ದರು. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ ಅಸಾ.3 ಆರೋಪಿಯು ಖಾಸಗಿ ಬಸ್ಸನ್ನು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಕಾರಣ ಈ ಅಪಘಾತವಾಗಿತ್ತು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾಸಾ.6 – ರಘು**

ಚಾಸಾ.6 ಅಸಾ.4 ಎಂದು ಸಾಕ್ಷಿ ನುಡಿಯುತ್ತಾ 2010ನೇ ಸಾಲಿನ ಜನವರಿ ತಿಂಗಳಲ್ಲಿ ಮಧ್ಯಾಹ್ನ ಸುಮಾರು ಮೂರು ಗಂಟೆಗೆ ತಾನು ತನ್ನ ಕಾರಿನಲ್ಲಿ ಕಟಪಾಡಿ ಕಡೆಯಿಂದ ಉಡುಪಿಗೆ ಹೋಗುತ್ತಿದ್ದಾಗ ಸುಂದರ ಮತ್ತು ಚಾಸಾ.2 ರವರು ತನ್ನ ಕಾರಿನ ಮುಂಭಾಗದಲ್ಲಿ ಸುಮಾರು 150 ಮೀಟರ್ ಅಂತರದಲ್ಲಿ ಒಂದು ಮೋಟಾರು ಬೈಕಿನಲ್ಲಿ ಹೋಗುತ್ತಿದ್ದರು ಎನ್ನುತ್ತಾರೆ. ಅಸಾ.4 ಮುಂದುವರಿದು ಉದ್ಯಾವರ ಸೇತುವೆಯ ಮೇಲೆ ಉಡುಪಿ ಕಡೆಯಿಂದ ಒಂದು ಖಾಸಗಿ ಬಸ್ಸು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಮತ್ತು ಅತೀ ವೇಗದಿಂದ ಬಂದು ಸುಂದರ ಮತ್ತು ಚಾಸಾ.2 ಹೋಗುತ್ತಿದ್ದ ಮೋಟಾರು ಬೈಕಿಗೆ ಡಿಕ್ಕಿ ಹೊಡೆದಿತ್ತು ಆ ಕಾರಣ ಸುಂದರ ಅವರು ರಸ್ತೆ ಮೇಲೆ ಬಿದ್ದು ಮಾರಣಾಂತಿಕ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಮತ್ತು ಚಾಸಾ.2 ರವರಿಗೆ ಗಂಭೀರ ಸ್ವರೂಪದ ಗಾಯಗಳಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.4 ಮುಂದುವರಿದು ಅಪಘಾತ ನಡೆದ ಮಾರನೆಯ ದಿನ ಪೋಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ.2ರಂತೆ ಮಹಜರನ್ನು



Teachingninja.in

ಮತ್ತು ನಿಶಾನೆ ಪಿ.3 ರಂತೆ ಸ್ಥಳದ ನಕಾಶೆಯನ್ನು ತಯಾರಿಸಿ ಅಪಘಾತಕ್ಕೆ ಒಳಪಟ್ಟ ಬಸ್ಸನ್ನು ಮತ್ತು ಮೋಟಾರು ಬೈಕನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

ಅಸಾ.4 ತನ್ನ ಪಾಟೀ ಸವಾಲಿನಲ್ಲಿ ಉದ್ಯಾವರ ಸೇತುವೆಯ ಮೊದಲು ರಸ್ತೆಯಲ್ಲಿ ತಿರುವುಗಳು ಇದ್ದು ರಸ್ತೆಯ ಅಗಲ ಕಡಿಮೆ ಇದೆ ಎಂದು ಹೇಳುತ್ತಾರೆ. ಅಸಾ.4 ಮುಂದುವರಿದು ತಾನು ಸುಂದರನ ಸಂಬಂಧಿಯಾಗಿದ್ದು ಇಬ್ಬರೂ ಕೂಡ ಆ ದಿನ ಪಡುಬಿದ್ರಿಯಲ್ಲಿ ಒಂದು ಸಮಾರಂಭಕ್ಕೆ ಹಾಜರಾಗಿದ್ದೆವು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.4 ಆ ಸಮಾರಂಭದಲ್ಲಿ ಮೃತ ಸುಂದರ ಮಧ್ಯಪಾನ ಮಾಡಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.4 ಅಪಘಾತವಾಗುವ ಕಾಲಕ್ಕೆ ಮೃತ ಸುಂದರ ಮೊಬೈಲ್ ಫೋನಿನಲ್ಲಿ ಮಾತನಾಡುತ್ತಿದ್ದ ಮತ್ತು ತನ್ನ ಮೋಟಾರು ಬೈಕನ್ನು ನಿಯಂತ್ರಿಸಲಾಗದೆ ತಾನೇ ಆ ಬೈಕನ್ನು ಖಾಸಗಿ ಬಸ್ಸಿಗೆ ಡಿಕ್ಕಿ ಹೊಡೆದಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.4 ಈ ಅಪಘಾತವು ಆರೋಪಿಯು ಖಾಸಗಿ ಬಸ್ಸನ್ನು ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಕಾರಣ ಆಗಿದಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.4 ಪೋಲಿಸರು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲ ಎನ್ನುವ ಸೂಚನೆಯನ್ನು ಕೂಡ ನಿರಾಕರಿಸಿದ್ದಾರೆ. ಅಸಾ.4 ತಾನು ಆ ಮಹಜರಿಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಮತ್ತು ಮೃತ ಸುಂದರ ನನ್ನ ಸಂಬಂಧಿಯಾಗಿರುವ ಕಾರಣ ಆತನ ಕುಟುಂಬದ ಸದಸ್ಯರಿಗೆ ಪರಿಹಾರ ಸಿಗಲಿ ಎನ್ನುವ ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದನ್ನು ನಿರಾಕರಿಸಿದ್ದಾರೆ.

**ಚಾಸಾ.12- ವಿಜಯ್ ಕುಮಾರ್**

ಚಾಸಾ.12 ಅಸಾ.5 ಎಂದು ಸಾಕ್ಷಿ ನುಡಿಯುತ್ತಾ ತಾನು 2009-2011ರ ಸಾಲಿನಲ್ಲಿ ಉಡುಪಿ ಗ್ರಾಮಾಂತರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆ ಎನ್ನುತ್ತಾರೆ. ಅಸಾ.5 ಮುಂದುವರಿದು ದಿನಾಂಕ 20.01.2010ರಂದು ಸಂಜೆ ಸುಮಾರು 6.00 ಗಂಟೆಗೆ ತಾನು ಪೋಲೀಸ್ ಠಾಣೆಯಲ್ಲಿ ಇದ್ದಾಗ ಚಾಸಾ.1ರವರು ತನ್ನ ಮುಂದೆ ಹಾಜರಾಗಿ ನಿಶಾನೆ ಪಿ.1 ರಂತೆ ಒಂದು ದೂರನ್ನು ಸಲ್ಲಿಸಿದ್ದು ಅದರ ಆಧಾರದ ಮೇಲೆ ನಿಶಾನೆ ಪಿ.8ರಂತೆ ಮೊಕದ್ದಮೆ ಸಂಖ್ಯೆ 27/2010ರಲ್ಲಿ ಒಂದು ಪ್ರ.ವ. ವರದಿಯನ್ನು ದಾಖಲು ಮಾಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುಂದುವರಿದು ಮರುದಿನ ತಾನು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ನಿಶಾನೆ ಪಿ.2ರಂತೆ ಒಂದು ಮಹಜರನ್ನು ಮತ್ತು ನಿಶಾನೆ ಪಿ.3ರಂತೆ ಸ್ಥಳದ ನಕಾಶೆಯನ್ನು ತಯಾರಿಸಿ ಅಪಘಾತಕ್ಕೆ



Teachingninja.in

ಒಳಪಟ್ಟ ಬಸ್ಸು ಮತ್ತು ಮೋಟಾರು ಬೈಕನ್ನು ಅಮಾನತ್ತು ಪಡಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುಂದುವರಿದು ತಾನು ಚಾಸಾ,2 ಮತ್ತು ಚಾಸಾ.4 ರಿಂದ 6 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುಂದುವರಿದು ತಾನು ಉಡುಪಿಯ ಸರ್ಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟು ಮೃತ ಸುಂದರನ ಶವದ ಮೇಲೆ ನಿಶಾನೆ ಪಿ.4 ರಂತೆ ಶವ ಮಹಜರನ್ನು ನಡೆಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುಂದುವರಿದು ತಾನು ಆರೋಪಿಯನ್ನು ಬಂಧಿಸಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ ಚಾಸಾ.2ರವರ ಗಾಯದ ಪ್ರಮಾಣ ಪತ್ರವನ್ನು ನಿಶಾನೆ ಪಿ.5ರಂತೆ ಮತ್ತು ಮರಣೋತ್ತರ ಪರೀಕ್ಷಾ ವರದಿಯನ್ನು ನಿಶಾನೆ ಪಿ.6 ರಂತೆ ಮತ್ತು ಮೋಟಾರು ವಾಹನಗಳ ಪರಿವೀಕ್ಷಣಾ ವರದಿಯನ್ನು ನಿಶಾನೆ ಪಿ.7ರಂತೆ ಪಡೆದುಕೊಂಡು ತನಿಖೆಯನ್ನು ಪೂರೈಸಿ ಅರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

ಅಸಾ.5 ತನ್ನ ಪಾಟೀ ಸವಾಲಿನಲ್ಲಿ ತಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ತುಂಬಾ ಜನರು ಸೇರಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ತಾನು ಆ ಎಲ್ಲಾ ಜನರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಅಸಾ.5 ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಮತ್ತು ಅವರ ಹೇಳಿಕೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ತಾನು ತಯಾರಿಸಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.5 ತಾನು ಮಹಜರನ್ನು ಮತ್ತು ಸ್ಥಳದ ನಕಾಶೆಯನ್ನು ಪೋಲೀಸ್ ಠಾಣೆಯಲ್ಲಿಯೇ ತಯಾರಿಸಿ ಅದಕ್ಕೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.5 ನಿಶಾನೆ ಪಿ.3 ನಕಾಶೆಯಲ್ಲಿ ಕಾಣಿಸಿದಂತೆ ಉದ್ಯಾವರ ಸೇತುವೆಯ ಮೊದಲು ರಸ್ತೆಯಲ್ಲಿ ತಿರುವುಗಳು ಇವೆ ಮತ್ತು ಉದ್ಯಾವರ ಸೇತುವೆಯಲ್ಲಿ ರಸ್ತೆಯ ಅಗಲ ತುಂಬಾ ಕಿರಿದಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಅಸಾ.5 ಆ ಸೇತುವೆ ಮೇಲೆ ಎರಡು ಘನ ವಾಹನಗಳನ್ನು ಏಕಕಾಲದಲ್ಲಿ ಚಲಾಯಿಸಲು ಆಗುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಅಸಾ.5 ನಾನು ಘಟನಾ ಸ್ಥಳಕ್ಕೆ ಭೇಟಿಕೊಟ್ಟ ಬಳಿಕ ಮತ್ತು ತನಿಖೆಯನ್ನು ನಡೆಸಿದ ಬಳಿಕ ಈ ಅಪಘಾತ ಸುಂದರನ ತಪ್ಪಿನಿಂದ ಆಗಿದೆ ಎಂದು ನನಗೆ ತಿಳಿದು ಬಂದರೂ ಕೂಡ ನಾನು ಮೃತ ಸುಂದರನ ಕಾನೂನುಬದ್ಧ ವಾರಸುದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎನ್ನುವ ಕಾರಣದಿಂದ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.



Teachingninja.in

## ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆ

ಆರೋಪಿಯ ವಿರುದ್ಧ ಇರುವ ಎಲ್ಲಾ ಹೇಳಿಕೆಗಳನ್ನು ಆರೋಪಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಅವುಗಳನ್ನು ಸುಳ್ಳು ಎಂದು ನಿರಾಕರಿಸಿ ತಾನು ಉದ್ಯಾವರ ಸೇತುವೆಯ ಮೇಲೆ ಖಾಸಗಿ ಬಸ್ಸನ್ನು ನಿಧಾನವಾಗಿಯೇ ಚಲಾಯಿಸುತ್ತಿದ್ದು ಮುಂಭಾಗದಿಂದ ಬರುತ್ತಿದ್ದ ಬೈಕಿನ ಚಾಲಕನು ಮೊಬೈಲ್ ಫೋನಿನಲ್ಲಿ ಮಾತನಾಡಿಕೊಂಡು ಬರುತ್ತಿದ್ದ ಮತ್ತು ಅತೀ ವೇಗವಾಗಿ ಚಲಾಯಿಸಿದ ಕಾರಣ ಬೈಕನ್ನು ನಿಯಂತ್ರಿಸಲಾಗದೆ ತನ್ನ ಬಸ್ಸಿಗೆ ಡಿಕ್ಕಿ ಹೊಡೆದಿದ್ದ ಎಂದು ಆರೋಪಿಯು ಹೇಳುತ್ತಾರೆ. ಆರೋಪಿಯು ಮುಂದುವರಿದು ಈ ಅಪಘಾತಕ್ಕೆ ತಾನು ಕಾರಣ ಅಲ್ಲ ಎಂದು ನುಡಿದಿರುತ್ತಾರೆ.

## ಅಭಿಯೋಜನೆಯ ಪರ ವಾದದ ಮುಖ್ಯಾಂಶಗಳು

- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದದಲ್ಲಿ ಅಪಘಾತ ನಡೆದಿರುವ ಬಗ್ಗೆ ಮತ್ತು ಆರೋಪಿಯು ತಪ್ಪು ಮಾಡಿದ ಖಾಸಗಿ ಬಸ್ಸಿನ ಚಾಲಕನಾಗಿದ್ದ ಎನ್ನುವ ಬಗ್ಗೆ ಯಾವುದೇ ಬಿನ್ನಾಭಿಪ್ರಾಯ ಇಲ್ಲ ಎಂದು ವಾದಿಸುತ್ತಾರೆ.
- ಅಪಘಾತದ ಕಾರಣ ಸುಂದರ ಮೃತಪಟ್ಟಿರುವುದನ್ನು ಮತ್ತು ಚಾಸಾ.2 ರವರಿಗೆ ಗಾಯಗಳಾಗಿರುವುದನ್ನು ಆರೋಪಿಯು ತಕರಾರು ಮಾಡಿಲ್ಲವಾದ್ದರಿಂದ ಶವ ಮಹಜರು, ಮರಣೋತ್ತರ ಪರೀಕ್ಷಾ ವರದಿ, ಮೋಟಾರು ವಾಹನಗಳ ನಿರೀಕ್ಷಕರ ವರದಿ ಮತ್ತು ಚಾಸಾ.2 ರವರ ಗಾಯದ ಪ್ರಮಾಣ ಪತ್ರಗಳನ್ನು ಒಪ್ಪಿಗೆಯಿಂದ ಗುರುತಿಸಲಾಗಿದೆ.
- ಅಪಘಾತದ ಕಾರಣ ಮಾತ್ರ ವಿವಾದಿತ ವಿಷಯವಾಗಿರುತ್ತದೆ. ಈ ಅಪಘಾತವು ಆರೋಪಿಯು ಖಾಸಗಿ ಬಸ್ಸನ್ನು ದುಡಿಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿದ ಕಾರಣ ಆಗಿತ್ತು ಎಂದು ಸಾಬೀತು ಪಡಿಸಲು ಅಸಾ.1, 2 ಮತ್ತು 4 ಇವರ ಸಾಕ್ಷ್ಯಗಳಿವೆ. ಅವರ ಸಾಕ್ಷ್ಯಕ್ಕೆ ಬೆಂಬಲವಾಗಿ ನಿಶಾನೆ ಪಿ.2 ಸ್ಥಳ ಮಹಜರು ಮತ್ತು ನಿಶಾನೆ ಪಿ.3 ನಕಾಶೆ ಇರುತ್ತದೆ.
- ಅಸಾ.1, 2 ಮತ್ತು 4 ಇವರನ್ನು ಆರೋಪಿ ಪರ ಮಾನ್ಯ ವಕೀಲರು ಪಾಟೀ ಸವಾಲು ಮಾಡಿದ್ದರೂ ಕೂಡ ಅವರ ಪಾಟೀ ಸವಾಲಿನಲ್ಲಿ ಅವರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಅಂಶವನ್ನು ಹೊರತಂದಿರುವುದಿಲ್ಲ.



Teachingninja.in

- ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿ ಯಾವುದೇ ದುರ್ಬಲತೆಯಿಂದ ಹೊರತಾಗಿದ್ದು ಅಭಿಯೋಜನೆಯ ಪ್ರಕರಣವನ್ನು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆ. ಆದುದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಆರೋಪಿಯನ್ನು ಶಿಕ್ಷಿಸಲು ಕೋರುತ್ತಾರೆ.

**ಆರೋಪಿ ಪರ ವಾದದ ಮುಖ್ಯಾಂಶಗಳು**

- ಆರೋಪಿ ಪರ ಮಾನ್ಯ ವಕೀಲರು ಅಭಿಯೋಜನೆಯು ಹಾಜರು ಪಡಿಸಿರುವ ಸಾಕ್ಷ್ಯದಲ್ಲಿ ತುಂಬಾ ವಿರೋದಾಭಾಸಗಳು, ವ್ಯತ್ಯಾಸಗಳು ಮತ್ತು ನ್ಯೂನ್ಯತೆಗಳು ಇವೆ ಎಂದು ವಾದಿಸುತ್ತಾರೆ.
- ಅಭಿಯೋಜನೆಯನ್ನು ಬೆಂಬಲಿಸಿದ ಸಾಕ್ಷಿದಾರರು ಸಂಬಂಧಿಕರಾಗಿದ್ದು ಅವರು ಆಸಕ್ತಿಯುಳ್ಳ ಸಾಕ್ಷಿದಾರರು. ಆ ಕಾರಣದಿಂದ ಅವರ ಸಾಕ್ಷಿ ಹೇಳಿಕೆಗಳನ್ನು ಆರೋಪಿಯನ್ನು ಶಿಕ್ಷಿಸಲು ಪರಿಗಣಿಸಲಾಗುವುದಿಲ್ಲ.
- ಸ್ವತಂತ್ರ್ಯ ಸಾಕ್ಷಿದಾರರು ಲಭ್ಯವಿದ್ದರು ಕೂಡ ತನಿಖಾಧಿಕಾರಿಯವರು ಕೇವಲ ಮೃತ ಸುಂದರನ ಗೆಳೆಯರನ್ನು ಮತ್ತು ಸಂಬಂಧಿಕರನ್ನು ಮಾತ್ರ ಸಾಕ್ಷಿ ಮಾಡಿರುತ್ತಾರೆ.
- ಸ್ಥಳ ನಕಾಶೆ ಮತ್ತು ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯ ಉಡುಪಿ ಕಡೆಯಿಂದ ಬರುವಾಗ ಉದ್ಯಾವರ ಸೇತುವೆಯ ಮೊದಲು ರಸ್ತೆಯಲ್ಲಿ ಕಡಿದಾದ ತಿರುವುಗಳು ಇರುವುದನ್ನು ಮತ್ತು ಆ ಕಾರಣದಿಂದ ಬಸ್ಸನ್ನು ಅಪಘಾತ ನಡೆದ ಸ್ಥಳದಲ್ಲಿ ಅತೀ ವೇಗದಲ್ಲಿ ಚಲಾಯಿಸಲು ಆಗುವುದಿಲ್ಲ ಎಂದು ಸಾಬೀತು ಆಗುತ್ತದೆ.
- ಅಭಿಯೋಜನಾ ಸಾಕ್ಷಿದಾರರು ಉದ್ಯಾವರ ಸೇತುವೆಯ ಮೇಲೆ ರಸ್ತೆಯ ಅಗಲ ತುಂಬಾ ಕಿರಿದಾಗಿದೆ ಮತ್ತು ಎರಡು ಘನ ವಾಹನಗಳನ್ನು ಏಕಕಾಲದಲ್ಲಿ ಚಲಾಯಿಸಲು ಆಗುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ.
- ಈ ಎಲ್ಲಾ ಕಾರಣಗಳಿಂದ ಆರೋಪಿ ಪರ ಮಾನ್ಯ ವಕೀಲರು ಆರೋಪಿಗೆ ಸಂಶಯದ ಲಾಭವನ್ನು ನೀಡಿ ಬಿಡುಗಡೆ ಮಾಡಲು ಕೋರಿರುತ್ತಾರೆ

*********



Teachingninja.in